INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-8, Issue -05,September-October, 2026
Page No,31-41
Peer -Reviewed, Refereed Journal

# ಭಾರತದ ರಾಜಕಾರಣದಲ್ಲಿ ಅಂಬೇಡ್ಕರ್ ಮತ್ತು ನೆಹರೂ ಅವರ ರಾಜಕೀಯ ಚಿಂತನೆಯ ಸಮಕಾಲೀನ ಪ್ರಸ್ತುತತೆ ಕುರಿತ ವಿಮರ್ಶಾತ್ಮಕ ಅಧ್ಯಯನ

ಡಾ.ಎಂ.ರಾಚಪ್ಪಾಜಿ.[1]

**ಸಾರಾಂಶ:** ಅಂಬೇಡ್ಕರ್ ಮತ್ತು ಜವಾಹರಲಾಲ್ ನೆಹರೂ ಅವರು ಭಾರತೀಯ ರಾಜಕೀಯ ಮತ್ತು ಬೌದ್ಧಿಕ ಇತಿಹಾಸದಲ್ಲಿ ಪ್ರಮುಖ ಸ್ಥಾನ ಹೊಂದಿದ್ದಾರೆ. ಇವರು ಸ್ವಾತಂತ್ರ್ಯದ ಅನಂತರ ಭಾರತದ ರಾಜಕೀಯ ವ್ಯವಸ್ಥೆಯ ನಿರೂಪಣೆಯಲ್ಲಿ ಅತ್ಯಂತ ಪ್ರಮುಖ ಪಾತ್ರವನ್ನು ನಿರ್ವಹಿಸಿದವರು. ಅಂಬೇಡ್ಕರ್ ಅವರು ಸಾಮಾಜಿಕ ನ್ಯಾಯ, ಜಾತಿ ವಿನಾಶ, ಸಾಂವಿಧಾನಿಕತೆ ಮತ್ತು ವೈಯಕ್ತಿಕ ಸ್ವಾತಂತ್ರ್ಯಗಳ ಮೇಲೆ ಗಮನಹರಿಸಿದರೆ, ನೆಹರು ಅವರು ಸಂಸದೀಯ ಪ್ರಜಾಪ್ರಭುತ್ವ, ಜಾತ್ಯತೀತತೆ, ಆರ್ಥಿಕ ಯೋಜನಾಭಿವೃದ್ಧಿ ಮತ್ತು ರಾಷ್ಟ್ರೀಯ ಏಕತೆಯ ಮೇಲೆ ಹೆಚ್ಚು ಒತ್ತು ನೀಡಿದವರು. ಇವರಿಬ್ಬರ ರಾಜಕೀಯ ಚಿಂತನೆಗಳು ಇಂದಿನ ಸಮಕಾಲೀನ ಭಾರತದಲ್ಲಿ ಸಾಮಾಜಿಕ ನ್ಯಾಯ, ಜಾತಿ ತಾರತಮ್ಯ, ಮೀಸಲಾತಿ, ಪ್ರಗತಿ ಮತ್ತು ಪ್ರಜಾಪ್ರಭುತ್ವ ಸಂಸ್ಥೆಗಳ ವಿಚಾರಗಳಲ್ಲಿಯೂ ಇನ್ನೂ ಹೆಚ್ಚು ಪ್ರಸ್ತುತವಾಗಿರುತ್ತವೆ. ಪ್ರಸ್ತುತ ಅಧ್ಯಯನವು ಇವರಿಬ್ಬರ ಬೌದ್ಧಿಕ ರಾಜಕೀಯ ಚಿಂತನಾಧಾರೆಗಳು ಭಾರತದಲ್ಲಿ ಪ್ರಜಾಪ್ರಭುತ್ವದ ಸವಾಲುಗಳು ಮತ್ತು ಸಾಧ್ಯತೆಗಳನ್ನು ಅರ್ಥಮಾಡಿಕೊಳ್ಳಲು ಹೆಚ್ಚು ಸಹಾಯಕವಾಗಿರುತ್ತವೆ ಎಂಬುದನ್ನು ಸ್ಥೂಲವಾಗಿಯೇ ವಿಶ್ಲೇಷಿಸುತ್ತದೆ.

**ಪ್ರಧಾನ ಪದಗಳು:** ಅಂಬೇಡ್ಕರ್, ಜವಾಹರಲಾಲ್ ನೆಹರು, ಭಾರತದ ರಾಜಕಾರಣ, ಸಾಂವಿಧಾನಿಕ ಪ್ರಜಾಪ್ರಭುತ್ವ, ಸಾಮಾಜಿಕ ನ್ಯಾಯ, ಜಾತ್ಯತೀತತೆ, ಪ್ರಜಾಪ್ರಭುತ್ವ, ಆರ್ಥಿಕ ಯೋಜನಾಭಿವೃದ್ಧಿ, ಸಮಕಾಲೀನ ಭಾರತ.

**ಪೀಠಿಕೆ:** ಸ್ವಾತಂತ್ರ್ಯ ಅನಂತರದ ಭಾರತೀಯ ರಾಜಕಾರಣವು ಚುನಾವಣಾ ರಾಜಕಾರಣದ ವಿಸ್ತರಣೆ, ಪ್ರಾದೇಶಿಕ ಪಕ್ಷಗಳ ಉದಯ, ಸಮ್ಮಿಶ್ರ ರಾಜಕೀಯ, ಸಾಮಾಜಿಕ ಚಳುವಳಿಗಳು, ಆರ್ಥಿಕ ಉದಾರೀಕರಣ, ಅಸ್ಮಿತೆಯ ರಾಜಕಾರಣ ಮತ್ತು ತಾಂತ್ರಿಕತೆಯ ಪ್ರಗತಿಯಿಂದಾಗಿಯೇ ಹಲವು ಹತ್ತು ಮಹತ್ತರವಾದಂತಹ ಬದಲಾವಣೆಗಳನ್ನು ಕಂಡಿರುತ್ತದೆ. ಆದರೂ ಸಹ ಸಾಮಾಜಿಕ ಅಸಮಾನತೆ, ಜಾತಿ ತಾರತಮ್ಯ, ಆರ್ಥಿಕ ಅಸಮಾನತೆ, ಅಲ್ಪಸಂಖ್ಯಾತರ ಹಕ್ಕುಗಳು, ಪ್ರಾತಿನಿಧ್ಯ, ಪ್ರಜಾಪ್ರಭುತ್ವ ಮತ್ತು

[1].ಅಧ್ಯಾಪಕರು, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರ ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು.

ರಾಷ್ಟ್ರೀಯ ಏಕತೆಯಂತಹ ಪ್ರಶ್ನೆಗಳು ಇಂದಿಗೂ ಪ್ರಮುಖವಾಗಿರುತ್ತವೆ. ಈ ನೆಲೆ ಮತ್ತು ಹಿನ್ನೆಲೆಯಲ್ಲಿ ಅಂಬೇಡ್ಕರ್ ಮತ್ತು ಜವಾಹರಲಾಲ್ ನೆಹರು ಅವರ ರಾಜಕೀಯ ಚಿಂತನೆಗಳು ಸಮಕಾಲೀನ ಭಾರತೀಯ ರಾಜಕೀಯವನ್ನು ಅರ್ಥಮಾಡಿಕೊಳ್ಳಲು ಪ್ರಮುಖ ಆಧಾರಗಳಾಗಿರುತ್ತವೆ. ಅಂಬೇಡ್ಕರ್ ಅವರು ಸಾಮಾಜಿಕ ನ್ಯಾಯ, ಸಮಾನತೆ, ಸಾಂವಿಧಾನಾತ್ಮಕ ಹಕ್ಕುಗಳು, ರಾಜಕೀಯ ಪ್ರಾತಿನಿಧ್ಯ, ಮೀಸಲಾತಿ ಮತ್ತು ಸಾಮಾಜಿಕ ಪ್ರಜಾಪ್ರಭುತ್ವಕ್ಕೆ ಹೆಚ್ಚು ಒತ್ತು ನೀಡಿದರು. ನೆಹರು ಅವರು ಸಂಸದೀಯ ಪ್ರಜಾಪ್ರಭುತ್ವ, ಜಾತ್ಯತೀತತೆ, ವೈಜ್ಞಾನಿಕ ಮನೋಭಾವ, ಯೋಜಿತ ಆರ್ಥಿಕ ಅಭಿವೃದ್ಧಿ, ಕೈಗಾರಿಕೀಕರಣ, ರಾಷ್ಟ್ರೀಯ ಏಕತೆ ಮತ್ತು ಸ್ವತಂತ್ರ ವಿದೇಶಾಂಗ ನೀತಿಗೆ ಹೆಚ್ಚಿನ ಮಹತ್ವ ನೀಡಿದರು.

**ಅಧ್ಯಯನದ ಪ್ರಾಮುಖ್ಯತೆ:** ಸಮಕಾಲೀನ ಭಾರತೀಯ ರಾಜಕಾರಣದ ಸ್ವರೂಪ, ಪ್ರಜಾಪ್ರಭುತ್ವದ ಸ್ಥಿರತೆ, ಸಾಮಾಜಿಕ ನ್ಯಾಯ, ಜಾತ್ಯತೀತತೆ, ಧಾರ್ಮಿಕ ಬಹುತ್ವ, ಆರ್ಥಿಕ ಅಭಿವೃದ್ಧಿ, ರಾಜಕೀಯ ಪ್ರಾತಿನಿಧ್ಯ ಮತ್ತು ರಾಷ್ಟ್ರ ನಿರ್ಮಾಣದ ಪ್ರಕ್ರಿಯೆಯನ್ನು ಅರ್ಥಮಾಡಿಕೊಳ್ಳುವ ದೃಷ್ಟಿಯಿಂದ ಮಹತ್ವದ್ದಾಗಿದೆ. ಅಂಬೇಡ್ಕರ್ ಅವರು ಸಾಮಾಜಿಕ ಸಮಾನತೆ, ಜಾತಿ ನಿರ್ಮೂಲನೆ, ಸಾಂವಿಧಾನಾತ್ಮಕ ಹಕ್ಕುಗಳು, ಸಾಮಾಜಿಕ ನ್ಯಾಯ, ರಾಜಕೀಯ ಪ್ರಾತಿನಿಧ್ಯ ಮತ್ತು ಸಾಂವಿಧಾನಾತ್ಮಕ ಪ್ರಜಾಪ್ರಭುತ್ವಕ್ಕೆ ಒತ್ತು ನೀಡಿದರೆ, ನೆಹರೂ ಅವರು ಜಾತ್ಯತೀತತೆ, ಪ್ರಜಾಪ್ರಭುತ್ವ, ವೈಜ್ಞಾನಿಕ ಮನೋಭಾವ, ಆಧುನಿಕತೆ, ಯೋಜಿತ ಆರ್ಥಿಕ ಅಭಿವೃದ್ಧಿ, ಕೈಗಾರಿಕೀಕರಣ ಮತ್ತು ರಾಷ್ಟ್ರೀಯ ಏಕತೆಗೆ ಮಹತ್ವ ನೀಡಿದರು.

ಇಂದಿನ ಭಾರತದಲ್ಲಿ ಜಾತಿ ಅಸಮಾನತೆ, ಸಾಮಾಜಿಕ ಬಹಿಷ್ಕಾರ, ಧಾರ್ಮಿಕ ಧ್ರುವೀಕರಣ, ಆರ್ಥಿಕ ಅಸಮಾನತೆ, ರಾಜಕೀಯ ಪ್ರಾತಿನಿಧ್ಯ, ಸಾಂವಿಧಾನಾತ್ಮಕ ಮೌಲ್ಯಗಳ ರಕ್ಷಣೆ ಮತ್ತು ಪ್ರಜಾಪ್ರಭುತ್ವದ ಗುಣಮಟ್ಟಸದ ಪ್ರಶ್ನೆಗಳು ನಿರಂತರವಾಗಿ ಚರ್ಚೆಗೆ ಒಳಗಾಗುತ್ತಿರುವ ಸಂದರ್ಭದಲ್ಲಿ ಅಂಬೇಡ್ಕರ್ ಮತ್ತು ನೆಹರೂ ಅವರ ಚಿಂತನೆಗಳು ಅತ್ಯಂತ ಪ್ರಸ್ತುತವಾಗಿವೆ. ಇವರಿಬ್ಬರ ರಾಜಕೀಯ ಚಿಂತನೆಗಳಲ್ಲಿ ಕಂಡುಬರುವ ಸಾಮ್ಯತೆ ಮತ್ತು ಭಿನ್ನತೆಗಳನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸುವುದರಿಂದ ಭಾರತದ ಪ್ರಜಾಸತ್ತಾತ್ಮಕ ಸಾಧನೆಗಳು ಹಾಗೂ ಮಿತಿಗಳನ್ನು ಹೆಚ್ಚು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಅಂಬೇಡ್ಕರ್ ಅವರ ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ದೃಷ್ಟಿಕೋನ ಹಾಗೂ ನೆಹರೂ ಅವರ ಜಾತ್ಯತೀತ, ಆಧುನಿಕ ಮತ್ತು ಅಭಿವೃದ್ಧಿ ಕೇಂದ್ರಿತ ರಾಷ್ಟ್ರನಿರ್ಮಾಣದ ಪರಿಕಲ್ಪನೆಗಳು ಸಮಕಾಲೀನ ಭಾರತದ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಸವಾಲುಗಳನ್ನು ವಿಶ್ಲೇಷಿಸಲು ಪರಿಣಾಮಕಾರಿ ಸೈದ್ಧಾಂತಿಕ ನೆಲೆಯನ್ನು ಒದಗಿಸುತ್ತವೆ.

**ಅಧ್ಯಯನದ ಉದ್ದೇಶಗಳು**

ಪ್ರಸ್ತುತ ರಚಿತವಾಗುತ್ತಿರುವ ಈ ಸಂಶೋಧನಾ ಲೇಖನವು ಕೆಲವು ಪ್ರಮುಖ ಉದ್ದೇಶಗಳನ್ನು ಹೊಂದಿರುತ್ತದೆ. ಅವುಗಳೆಂದರೆ;

- ಅಂಬೇಡ್ಕರ್ ಮತ್ತು ನೆಹರೂ ಅವರ ಮೂಲಭೂತ ರಾಜಕಾರಣದ ಆಲೋಚನೆಗಳನ್ನು ಪರಿಶೀಲಿಸುವುದು.
- ಸಮಕಾಲೀನ ಭಾರತದ ರಾಜಕಾರಣದಲ್ಲಿ ಅಂಬೇಡ್ಕರ್ ಮತ್ತು ನೆಹರೂ ಅವರ ಚಿಂತನಾಧಾರೆಗಳ ಪ್ರಸ್ತುತತೆಯನ್ನು ವಿಶ್ಲೇಷಿಸುವುದು.
- ಅಂಬೇಡ್ಕರ್ ಮತ್ತು ನೆಹರು ಅವರ ದೃಷ್ಟಿಕೋನದಲ್ಲಿ ಪ್ರಜಾಪ್ರಭುತ್ವ, ಸಾಮಾಜಿಕ ನ್ಯಾಯ, ಜಾತ್ಯತೀತತೆ ಮತ್ತು ಆರ್ಥಿಕ ಅಭಿವೃದ್ಧಿಯನ್ನು ಚರ್ಚಿಸುವುದು.
- ಸಮಕಾಲೀನ ಭಾರತಕ್ಕೆ ಅಂಬೇಡ್ಕರ್ ಮತ್ತು ನೆಹರು ಅವರ ರಾಜಕೀಯ ಚಿಂತನೆಧಾರೆಗಳ ಪ್ರಸ್ತುತತೆಯನ್ನು ವಿಮರ್ಶಾತ್ಮಕವಾಗಿ ಮೌಲ್ಯಮಾಪನ ಮಾಡುವುದು.

**ಸಂಶೋಧನಾ ವಿಧಾನ:** ಪ್ರಸ್ತುತ ಅಧ್ಯಯನವು ವಿವರಣಾತ್ಮಕ, ವಿಶ್ಲೇಷಣಾತ್ಮಕ, ಗುಣಾತ್ಮಕ, ತುಲನಾತ್ಮಕ ಹಾಗೂ ಐತಿಹಾಸಿಕ–ಸಾಂದರ್ಭಿಕ ವಿಧಾನಗಳನ್ನು ಆಧರಿಸಿರುತ್ತದೆ. ಅಧ್ಯಯನಕ್ಕೆ ಪ್ರಾಥಮಿಕ ಮತ್ತು ದ್ವಿತೀಯಕ ಆಕರಗಳನ್ನು ಬಳಸಲಾಗಿದೆ. ಮೂಲ ಬರೆಹಗಳು, ಭಾಷಣಗಳು, ಪತ್ರಗಳು, ಸಂವಿಧಾನ ರಚನಾ ಸಭೆಯ ಚರ್ಚೆಗಳು ಮತ್ತು ಅಧಿಕೃತ ದಾಖಲೆಗಳು ಪ್ರಾಥಮಿಕ ಆಕರಗಳಾಗಿದ್ದು, ವಿದ್ವಾಂಸರು ರಚಿಸಿರುವ ಗ್ರಂಥಗಳು, ಸಂಶೋಧನಾ ಲೇಖನಗಳು, ಐತಿಹಾಸಿಕ ಅಧ್ಯಯನಗಳು ಮತ್ತು ವಿದ್ವತ್ಪೂರ್ಣ ಕೃತಿಗಳು ದ್ವಿತೀಯಕ ಆಕರಗಳಾಗಿವೆ.

ಅಂಬೇಡ್ಕರ್ ಅವರ ರಾಜಕೀಯ ಚಿಂತನೆಯು ಜಾತಿ ವ್ಯವಸ್ಥೆಯ ನಿರ್ಮೂಲನೆ, ಸಾಮಾಜಿಕ ಅಸಮಾನತೆಯ ನಿವಾರಣೆ, ಪ್ರಜಾಪ್ರಭುತ್ವದ ಬಲವರ್ಧನೆ, ವೈಯಕ್ತಿಕ ಸ್ವಾತಂತ್ರ್ಯ, ಸಾಂವಿಧಾನಾತ್ಮಕ ಹಕ್ಕುಗಳು ಮತ್ತು ಸಾಮಾಜಿಕ ನ್ಯಾಯಗಳ ಸುತ್ತ ರೂಪುಗೊಂಡಿತ್ತು. ಅವರು ಕೇವಲ ರಾಜಕೀಯ ಸ್ವಾತಂತ್ರ್ಯವನ್ನು ಸಾಧಿಸುವುದಕ್ಕಿಂತಲೂ ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯ ಆಧಾರದ ಮೇಲೆ ಪ್ರಜಾಪ್ರಭುತ್ವ ಸಮಾಜವನ್ನು ನಿರ್ಮಿಸುವುದಕ್ಕೆ ಹೆಚ್ಚಿನ ಮಹತ್ವ ನೀಡಿದರು. ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ಸ್ವಾತಂತ್ರ್ಯತೆ, ಸಮಾನತೆ ಮತ್ತು ಭ್ರಾತೃತ್ವಗಳು ನೈಜ ಪ್ರಜಾಪ್ರಭುತ್ವದ ಮೂಲಾಧಾರಗಳಾಗಿದ್ದು, ಸಾಮಾಜಿಕ ಅಸಮಾನತೆ ಮತ್ತು ಜಾತಿ ತಾರತಮ್ಯ ಮುಂದುವರಿದ ಸಂದರ್ಭದಲ್ಲಿ ರಾಜಕೀಯ ಹಕ್ಕುಗಳು ಮಾತ್ರ ಸಮರ್ಪಕವಾಗುವುದಿಲ್ಲ. ಮತ್ತೊಂದೆಡೆ, ಜವಾಹರಲಾಲ್ ನೆಹರು ಅವರ ರಾಜಕೀಯ ಚಿಂತನೆಯು ರಾಷ್ಟ್ರ ನಿರ್ಮಾಣ, ಸಂಸದೀಯ ಪ್ರಜಾಪ್ರಭುತ್ವ, ಜಾತ್ಯತೀತತೆ, ರಾಷ್ಟ್ರೀಯ ಏಕತೆ, ಆರ್ಥಿಕ ಯೋಜನೆ, ವೈಜ್ಞಾನಿಕ ಮನೋಭಾವ, ಕೈಗಾರಿಕೀಕರಣ ಮತ್ತು ಅಂತರಾಷ್ಟ್ರೀಯ ಸಹಕಾರಗಳ ಮೇಲೆ

ಆಧಾರಿತವಾಗಿತ್ತು. ರಾಜಕೀಯ ಸ್ವಾತಂತ್ರ್ಯವನ್ನು ಕೇವಲ ವಸಾಹತುಶಾಹಿ ಆಡಳಿತದ ಅಂತ್ಯವೆಂದು ಪರಿಗಣಿಸದೆ, ಅದನ್ನು ಸಮಾಜೋ–ಆರ್ಥಿಕಾಭಿವೃದ್ಧಿ, ಆಧುನೀಕರಣ ಮತ್ತು ರಾಷ್ಟ್ರದ ಸಮಗ್ರ ಪ್ರಗತಿಯೊಂದಿಗೆ ಸಂಯೋಜಿಸುವುದು ನೆಹರು ಅವರ ಪ್ರಮುಖ ಆಶಯವಾಗಿತ್ತು. ಈ ನೆಲೆ ಮತ್ತು ಹಿನ್ನೆಲೆಯಲ್ಲಿ ಅಂಬೇಡ್ಕರ್ ಮತ್ತು ನೆಹರು ಅವರ ರಾಜಕೀಯ ಚಿಂತನೆಗಳು ವಿಭಿನ್ನ ಆದ್ಯತೆಗಳನ್ನು ಹೊಂದಿದ್ದರೂ, ಪ್ರಜಾಪ್ರಭುತ್ವ, ಸಮಾನತೆ, ಸಾಮಾಜಿಕ ನ್ಯಾಯ, ರಾಷ್ಟ್ರೀಯ ಏಕತೆ ಮತ್ತು ಆಧುನಿಕ ಭಾರತದ ನಿರ್ಮಾಣ ಎಂಬ ಬಹುವಿಶಾಲ ಗುರಿಗಳಲ್ಲಿ ಪರಸ್ಪರ ಪೂರಕತೆಯನ್ನು ಹೊಂದಿರುತ್ತವೆ.

ಅಂಬೇಡ್ಕರ್ ಅವರ ಸಾಂವಿಧಾನಿಕ ಪ್ರಜಾಪ್ರಭುತ್ವದ ಪರಿಕಲ್ಪನೆಯು ಸಮಾನತೆ, ಸ್ವಾತಂತ್ರ್ಯ, ನ್ಯಾಯ ಮತ್ತು ಭ್ರಾತೃತ್ವಗಳ ಮೇಲೆ ಆಧಾರಿತವಾಗಿದೆ. ಅವರ ದೃಷ್ಟಿಯಲ್ಲಿ ಸಂವಿಧಾನವು ಕೇವಲ ಆಡಳಿತದ ಕಾನೂನು ದಾಖಲೆಯಲ್ಲ; ಬದಲಾಗಿ, ಸಾಮಾಜಿಕ ಅಸಮಾನತೆ ಮತ್ತು ಜಾತಿ ಆಧಾರಿತ ವಿಭಜನೆಯನ್ನು ನಿವಾರಿಸಿ, ನಾಗರಿಕರ ಹಕ್ಕುಗಳನ್ನು ರಕ್ಷಿಸುವ ಹಾಗೂ ದುರ್ಬಲ ಜನವರ್ಗಗಳಿಗೆ ಕಾನೂನಾತ್ಮಕ ಭದ್ರತೆ ನೀಡುವ ಸಾಧನವಾಗಿದೆ. ಅಂಬೇಡ್ಕರ್ ಅವರ ಪ್ರಕಾರ; ಪ್ರಜಾಪ್ರಭುತ್ವವು ಕೇವಲ ಬಹುಮತದ ಆಡಳಿತ ಅಥವಾ ಚುನಾವಣೆಗಳಿಗೆ ಸೀಮಿತವಾಗದೆ, ಸಾಮಾಜಿಕ ಜೀವನದಲ್ಲಿಯೂ ಸಮಾನತೆ ಮತ್ತು ಭ್ರಾತೃತ್ವವನ್ನು ಸ್ಥಾಪಿಸಬೇಕು. ಇದಕ್ಕಾಗಿ ಅವರು ಸಾಮಾಜಿಕ ಪ್ರಜಾಪ್ರಭುತ್ವಕ್ಕೆ ಮಹತ್ವ ನೀಡಿರುವುದರ ಜೊತೆಗೆ ಸಾಂವಿಧಾನಿಕ ನೈತಿಕತೆ, ಕಾನೂನಿನ ಆಳ್ವಿಕೆ, ನಾಗರಿಕ ಹಕ್ಕುಗಳ ರಕ್ಷಣೆ ಮತ್ತು ಪ್ರಜಾಪ್ರಭುತ್ವ ಸಂಸ್ಥೆಗಳ ಸ್ವಾಯತ್ತತೆ ಪ್ರಜಾಪ್ರಭುತ್ವದ ಸ್ಥಿರತೆಗೆ ಅಗತ್ಯವೆಂದು ಪ್ರಬವಾಗಿಯೇ ಪ್ರತಿಪಾದಿಸಿದರು. ನೆಹರು ಅವರು ಪ್ರಜಾಪ್ರಭುತ್ವವನ್ನು ಕೇವಲ ಚುನಾವಣೆಗೆ ಸೀಮಿತಗೊಳಿಸದೆ, ಮುಕ್ತ ಚರ್ಚೆ, ಭಿನ್ನಾಭಿಪ್ರಾಯಕ್ಕೆ ಗೌರವ, ಪ್ರತಿಪಕ್ಷದ ಪಾತ್ರ, ಕಾನೂನಿನ ಆಳ್ವಿಕೆ ಮತ್ತು ಸಾಂವಿಧಾನಿಕ ಸಂಸ್ಥೆಗಳ ಬಲವರ್ಧನೆಗೆ ಹೆಚ್ಚು ಒತ್ತು ನೀಡಿದರು. ಸಮಕಾಲೀನ ಭಾರತದಲ್ಲಿ ಸಂಸದೀಯ ಚರ್ಚೆಯ ಗುಣಮಟ್ಟ, ರಾಜಕೀಯ ಹೊಣೆಗಾರಿಕೆ ಮತ್ತು ಸಂಸ್ಥೆಗಳ ಸ್ವಾಯತ್ತತೆಯ ಕುರಿತು ನಡೆಯುವ ಚರ್ಚೆಗಳಲ್ಲಿ ಅವರ ಪ್ರಜಾಪ್ರಭುತ್ವದ ಪರಿಕಲ್ಪನೆ ಪ್ರಸ್ತುತವಾಗಿದೆ.

**ಸಮಕಾಲೀನ ಭಾರತದಲ್ಲಿ ಅಂಬೇಡ್ಕರ್ ಮತ್ತು ನೆಹರು ಅವರ ರಾಜಕೀಯ ಚಿಂತನೆಯ ಪ್ರಸ್ತುತತೆ**

ಸಮಕಾಲೀನ ಭಾರತದಲ್ಲಿ ಅಂಬೇಡ್ಕರ್ ಅವರ ಸಾಂವಿಧಾನಿಕ ಪ್ರಜಾಪ್ರಭುತ್ವದ ಪರಿಕಲ್ಪನೆ ಅತ್ಯಂತ ಮಹತ್ವದ್ದಾಗಿದೆ. ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ಪ್ರಜಾಪ್ರಭುತ್ವವು ಕೇವಲ ಚುನಾವಣೆ ಮತ್ತು ರಾಜಕೀಯ ಪ್ರಾತಿನಿಧ್ಯಕ್ಕೆ ಸೀಮಿತವಾಗದೆ, ಮೂಲಭೂತ ಹಕ್ಕುಗಳು, ಸಾಮಾಜಿಕ ನ್ಯಾಯ, ಕಾನೂನಿನ ಆಳ್ವಿಕೆ, ನ್ಯಾಯಾಂಗದ ಸ್ವಾಯತ್ತತೆ, ಸಾಂವಿಧಾನಾತ್ಮಕ ಸಂಸ್ಥೆಗಳ ಬಲವರ್ಧನೆ ಮತ್ತು ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆಯನ್ನು ಒಳಗೊಂಡ ಸಮಗ್ರ ವ್ಯವಸ್ಥೆಯಾಗಿರಬೇಕು. ಜಾತಿ, ವರ್ಗ, ಲಿಂಗ ಮತ್ತು ಆರ್ಥಿಕ ಅಸಮಾನತೆಗಳು ಮುಂದುವರಿದಿರುವ ಇಂದಿನ ಸಂದರ್ಭದಲ್ಲಿ ರಾಜಕೀಯ ಸಮಾನತೆಯ

ಜೊತೆಗೆ ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯ ಅಗತ್ಯವನ್ನು ಅವರು ಒತ್ತಿಹೇಳಿದ ವಿಚಾರಗಳು ವಿಶೇಷ ಪ್ರಸ್ತುತತೆಯನ್ನು ಪಡೆದುಕೊಂಡಿವೆ. ಮೀಸಲಾತಿ, ದುರ್ಬಲ ಜನವರ್ಗಗಳ ರಾಜಕೀಯ ಪ್ರಾತಿನಿಧ್ಯ, ಶಿಕ್ಷಣ ಮತ್ತು ಉದ್ಯೋಗದಲ್ಲಿ ಸಮಾನ ಅವಕಾಶ, ಶೋಷಿತ–ಆದಿವಾಸಿ ಹಕ್ಕುಗಳು ಹಾಗೂ ಮಹಿಳಾ ಸಮಾನತೆಯ ಕುರಿತ ಸಮಕಾಲೀನ ಚರ್ಚೆಗಳಿಗೆ ಅಂಬೇಡ್ಕರ್ ಅವರ ಚಿಂತನೆ ಪ್ರಮುಖ ವೈಚಾರಿಕ ಆಧಾರವಾಗಿದೆ. ಅದೇ ರೀತಿಯಾಗಿ, ಜವಾಹರಲಾಲ್ ನೆಹರು ಅವರ ರಾಜಕೀಯ ಚಿಂತನೆಯೂ ಸಮಕಾಲೀನ ಭಾರತದ ರಾಜಕೀಯ ಮತ್ತು ಅಭಿವೃದ್ಧಿಯ ಚರ್ಚೆಗಳಲ್ಲಿ ಜಾತ್ಯತೀತತೆ, ಬಹುತ್ವ ಮತ್ತು ಸಮಾನ ಪೌರತ್ವದ ಮೂಲಕ ವಿವಿಧ ಧರ್ಮ, ಭಾಷೆ ಮತ್ತು ಸಂಸ್ಕೃತಿಗಳಿಗೆ ಸೇರಿದ ಜನರನ್ನು ರಾಷ್ಟ್ರೀಯ ಮುಖ್ಯವಾಹಿನಿಯಲ್ಲಿ ಒಳಗೊಳ್ಳಿಸುವ ಅವರ ದೃಷ್ಟಿಕೋನವು ಭಾರತದ ವೈವಿಧ್ಯಮಯ ಸಾಮಾಜಿಕ ವ್ಯವಸ್ಥೆಯಲ್ಲಿ ಪ್ರಸ್ತುತವಾಗಿದೆ.

ರಾಷ್ಟ್ರೀಯ ಏಕತೆ, ಒಕ್ಕೂಟ ವ್ಯವಸ್ಥೆ ಮತ್ತು ಪ್ರಜಾಪ್ರಭುತ್ವಾತ್ಮಕ ಸಂಸ್ಥೆಗಳ ಬಲವರ್ಧನೆಗೆ ಅವರು ನೀಡಿದ ಮಹತ್ವವೂ ಇಂದಿನ ರಾಜಕೀಯ ಸಂದರ್ಭದಲ್ಲಿ ಹೆಚ್ಚು ಗಮನಾರ್ಹವಾಗಿರುತ್ತದೆ. ಆರ್ಥಿಕ ಕ್ಷೇತ್ರದಲ್ಲಿ ಯೋಜಿತ ಅಭಿವೃದ್ಧಿ, ಕೈಗಾರೀಕರಣ ಮತ್ತು ಸಾರ್ವಜನಿಕ ವಲಯದ ಕುರಿತ ಅವರ ಚಿಂತನೆಗಳು ಅನಂತರದ ಆರ್ಥಿಕ ನೀತಿಗಳಿಂದ ಬದಲಾಗಿದ್ದರೂ, ಆರ್ಥಿಕ ಅಭಿವೃದ್ಧಿಯೊಂದಿಗೆ ಸಾಮಾಜಿಕ ನ್ಯಾಯವನ್ನು ಹೇಗೆ ಸಮನ್ವಯಗೊಳಿಸಬೇಕು ಎಂಬ ಚರ್ಚೆಯಲ್ಲಿ ಅವುಗಳ ಐತಿಹಾಸಿಕ ಮಹತ್ವ ಮುಂದುವರಿದಿರುತ್ತದೆ. ವೈಜ್ಞಾನಿಕ ಮನೋಭಾವ, ಸಂಶೋಧನೆ, ತಂತ್ರಜ್ಞಾನ ಮತ್ತು ಆಧುನೀಕರಣಕ್ಕೆ ಅವರು ನೀಡಿದ ಪ್ರಾಮುಖ್ಯತೆ ಕೃತಕ ಬುದ್ಧಿಮತ್ತೆ, ಡಿಜಿಟಲ್ ತಂತ್ರಜ್ಞಾನ ಮತ್ತು ವೈಜ್ಞಾನಿಕ ಪ್ರಗತಿಯ ಇಂದಿನ ಯುಗದಲ್ಲಿಯೂ ಪ್ರಸ್ತುತವಾಗಿರುತ್ತದೆ. ವಿದೇಶಾಂಗ ನೀತಿಯಲ್ಲಿ ಅಲಿಪ್ತತೆ ಮತ್ತು ಸ್ವತಂತ್ರ ನಿರ್ಧಾರ ಕೈಗೊಳ್ಳುವ ಅವರ ಪರಿಕಲ್ಪನೆಯು ಇಂದಿನ ಭಾರತದ ಕಾರ್ಯತಂತ್ರದ ಸ್ವಾಯತ್ತತೆ ಕುರಿತ ಚಿಂತನೆಯೊಂದಿಗೆ ಕೆಲವು ಸಾಮ್ಯತೆಗಳನ್ನು ಹೊಂದಿದೆ.

**ಅಂಬೇಡ್ಕರ್ ಮತ್ತು ನೆಹರು ಅವರ ರಾಜಕೀಯ ಚಿಂತನೆಯ ಪ್ರಮುಖ ಆಯಾಮಗಳು**

ಭಾರತದ ಆಧುನಿಕ ರಾಜಕೀಯ ಚಿಂತನೆಯ ಬೆಳವಣಿಗೆಯಲ್ಲಿ ಅಂಬೇಡ್ಕರ್ ಮತ್ತು ಜವಾಹರಲಾಲ್ ನೆಹರು ಅವರ ಕೊಡುಗೆಗಳು ಅತ್ಯಂತ ಮಹತ್ವದ್ದಾಗಿವೆ. ಇಬ್ಬರೂ ಪ್ರಜಾಪ್ರಭುತ್ವ, ಸಾಮಾಜಿಕ ನ್ಯಾಯ, ಸಮಾನತೆ ಮತ್ತು ಆಧುನಿಕ ಭಾರತದ ನಿರ್ಮಾಣವನ್ನು ಗುರಿಯಾಗಿಸಿಕೊಂಡಿದ್ದರೂ, ಅವುಗಳನ್ನು ಸಾಧಿಸುವ ಮಾರ್ಗ ಮತ್ತು ಆದ್ಯತೆಗಳಲ್ಲಿ ಕೆಲವು ಭಿನ್ನತೆಗಳಿದ್ದವು. ಅವರ ರಾಜಕೀಯ ಚಿಂತನೆಯ ಪ್ರಮುಖ ಆಯಾಮಗಳನ್ನು ಈ ಕೆಳಗಿನಂತೆ ಗುರುತಿಸಲಾಗಿದೆ. ಅವುಗಳೆಂದರೆ;

**ಪ್ರಜಾಪ್ರಭುತ್ವದ ಪರಿಕಲ್ಪನೆ:** ಅಂಬೇಡ್ಕರ್ ಅವರಿಗೆ ಪ್ರಜಾಪ್ರಭುತ್ವವೆಂದರೆ; ಕೇವಲ ಚುನಾವಣಾ ರಾಜಕಾರಣ ಮತ್ತು ಬಹುಮತದ ಆಡಳಿತವಲ್ಲ; ಅದು ಸ್ವಾತಂತ್ರ್ಯತೆ, ಸಮಾನತೆ ಮತ್ತು ಭ್ರಾತೃತ್ವವನ್ನು ತನ್ನ ಮೂಲದಲ್ಲಿ ಆಧರಿಸಿದಂತಹ ಸಾಮಾಜಿಕ ಜೀವನ ವಿಧಾನವಾಗಿತ್ತು. ರಾಜಕೀಯ ಪ್ರಜಾಪ್ರಭುತ್ವದ ಯಶಸ್ಸಿಗೆ ಸಾಮಾಜಿಕ ಪ್ರಜಾಪ್ರಭುತ್ವವೂ ಅಗತ್ಯವೆಂದು ಅಂಬೇಡ್ಕರ್ ಅವರು ಪ್ರಬಲವಾಗಿಯೇ ಪ್ರತಿಪಾದಿಸಿದರು. ನೆಹರು ಅವರು ಸಂಸದೀಯ ಪ್ರಜಾಪ್ರಭುತ್ವ, ಸಾರ್ವತ್ರಿಕ ವಯಸ್ಕ ಮತದಾನ, ಬಹುಪಕ್ಷೀಯ ವ್ಯವಸ್ಥೆ ಮತ್ತು ಸಂಸದೀಯ ಸಂಸ್ಥೆಗಳ ಬಲವರ್ಧನೆಗೆ ಹೆಚ್ಚಿನ ಒತ್ತು ನೀಡಿದರು. ಅಂಬೇಡ್ಕರ್ ಅವರು ಪ್ರಜಾಪ್ರಭುತ್ವದ ಸಾಮಾಜಿಕ ನೆಲೆಯನ್ನು ಒತ್ತಿಹೇಳಿದರೆ, ನೆಹರು ಅವರು ಅದರ ಪ್ರಜಾಸತ್ತಾತ್ಮಕ–ಸಾಂಸ್ಥಿಕ ವ್ಯವಸ್ಥೆಗೆ ಹೆಚ್ಚಿನ ಮಹತ್ವ ನೀಡಿದರು.

**ಸಾಮಾಜಿಕ ನ್ಯಾಯ ಮತ್ತು ಸಮಾನತೆ:** ಅಂಬೇಡ್ಕರ್ ಅವರ ರಾಜಕೀಯ ಚಿಂತನಾಧಾರೆಯ ಕೇಂದ್ರಬಿಂದು ಸಾಮಾಜಿಕ ನ್ಯಾಯ ಮತ್ತು ಜಾತಿ ನಿರ್ಮೂಲನೆ. ಜಾತಿ ವ್ಯವಸ್ಥೆಯು ಭಾರತೀಯ ಸಮಾಜದಲ್ಲಿ ಅಸಮಾನತೆಯನ್ನು ಶಾಶ್ವತಗೊಳಿಸಿದೆ ಎಂದು ಅಂಬೇಡ್ಕರ್ ಅವರು ವಿಶ್ಲೇಷಿಸಿ, ಜಾತಿ ನಿರ್ಮೂಲನೆಯ ಮೂಲಕ ಸಮಾನ ಸಮಾಜ ನಿರ್ಮಾಣವನ್ನು ಪ್ರತಿಪಾದಿಸಿದರು. ಪರಿಶಿಷ್ಟ ಜಾತಿ ಮತ್ತು ಇತರ ಹಿಂದುಳಿದ ಸಮುದಾಯಗಳಿಗೆ ರಾಜಕೀಯ, ಶೈಕ್ಷಣಿಕ ಮತ್ತು ಉದ್ಯೋಗ ಕ್ಷೇತ್ರಗಳಲ್ಲಿ ಅವಕಾಶಗಳನ್ನು ಒದಗಿಸುವುದಕ್ಕೆ ಒತ್ತು ನೀಡಿದರು. ನೆಹರು ಅವರು ಸಮಾಜೋ–ಆರ್ಥಿಕ ಅಸಮಾನತೆ ಕಡಿಮೆ ಮಾಡುವುದು, ಬಡತನ ನಿರ್ಮೂಲನೆ ಮತ್ತು ಕಲ್ಯಾಣ ರಾಜ್ಯ ನಿರ್ಮಾಣದ ಮೂಲಕ ಸಾಮಾಜಿಕ ನ್ಯಾಯ ಸಾಧಿಸಲು ಪ್ರಯತ್ನಿಸಿದರು.

**ಜಾತಿ ಮತ್ತು ಸಾಮಾಜಿಕ ಪರಿವರ್ತನೆ:** ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ಜಾತಿ ವ್ಯವಸ್ಥೆಯ ನಿರ್ಮೂಲನೆಯಿಲ್ಲದೆ ನಿಜವಾದ ಪ್ರಜಾಪ್ರಭುತ್ವ ಸಾಧ್ಯವಿಲ್ಲ. ಆದ್ದರಿಂದಲೇ ಅವರು ಜಾತಿ ವಿರೋಧಿ ಸಾಮಾಜಿಕ ಕ್ರಾಂತಿಗೆ ಹೆಚ್ಚು ಒತ್ತು ನೀಡಿದರು. ನೆಹರು ಅವರು ಜಾತಿ ವ್ಯವಸ್ಥೆಯನ್ನು ಆಧುನಿಕತೆ, ಶಿಕ್ಷಣ, ಕೈಗಾರಿಕೀಕರಣ ಮತ್ತು ವೈಜ್ಞಾನಿಕ ಮನೋಭಾವದ ಮೂಲಕ ದುರ್ಬಲಗೊಳಿಸುವ ಪ್ರಯತ್ನ ಮಾಡಿದರು. ಆದರೆ ಜಾತಿ ಪ್ರಶ್ನೆಯನ್ನು ಅಂಬೇಡ್ಕರ್ ಅವರಷ್ಟು ಕೇಂದ್ರ ರಾಜಕೀಯ ಪ್ರಶ್ನೆಯಾಗಿ ಪರಿಗಣಿಸಲಿಲ್ಲ.

**ಸಾಂವಿಧಾನಾತ್ಮಕತೆ ಮತ್ತು ಕಾನೂನಿನ ಆಳ್ವಿಕೆ:** ಅಂಬೇಡ್ಕರ್ ಅವರು ಸಾಂವಿಧಾನಾತ್ಮಕ ಪ್ರಜಾಪ್ರಭುತ್ವ, ಮೂಲಭೂತ ಹಕ್ಕುಗಳು, ಕಾನೂನಿನ ಆಳ್ವಿಕೆ, ಸ್ವತಂತ್ರ ನ್ಯಾಯಾಂಗ ಮತ್ತು ಸಾಂವಿಧಾನಾತ್ಮಕ ಸಂಸ್ಥೆಗಳಿಗೆ ಮಹತ್ವ ನೀಡಿದರು. ದುರ್ಬಲ ಜನವರ್ಗಗಳ ಹಕ್ಕುಗಳಿಗೆ ಸಾಂವಿಧಾನಾತ್ಮಕ ರಕ್ಷಣೆಯನ್ನು ಒದಗಿಸುವುದು ಅವರ ಪ್ರಮುಖ ಉದ್ದೇಶವಾಗಿತ್ತು. ನೆಹರು ಅವರು

ಸಾಂವಿಧಾನಾತ್ಮಕ ಆಡಳಿತ ಮತ್ತು ಸಂಸದೀಯ ಸಂಸ್ಥೆಗಳನ್ನು ಬಲಪಡಿಸುವುದರ ಜೊತೆಗೆ ಪ್ರಜಾಪ್ರಭುತ್ವದ ರಾಜಕೀಯ ಸಂಸ್ಕೃತಿಯನ್ನು ಬೆಳೆಸಲು ಪ್ರಯತ್ನಿಸಿದರು.

**ಧರ್ಮನಿರಪೇಕ್ಷತೆ ಮತ್ತು ಬಹುತ್ವ:** ಅಂಬೇಡ್ಕರ್ ಅವರು ಧರ್ಮವನ್ನು ವೈಯಕ್ತಿಕ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಸ್ವಾತಂತ್ರ್ಯದ ವಿಷಯವೆಂದು ಪರಿಗಣಿಸಿದರೂ, ರಾಜ್ಯವು ಎಲ್ಲ ನಾಗರಿಕರಿಗೂ ಸಮಾನ ಹಕ್ಕುಗಳನ್ನು ಒದಗಿಸಬೇಕು ಎಂದು ಪ್ರತಿಪಾದಿಸಿದರು. ನೆಹರು ಅವರ ಧರ್ಮನಿರಪೇಕ್ಷತೆ ಧರ್ಮದಿಂದ ರಾಜ್ಯದ ಸಮಾನ ಅಂತರ, ಎಲ್ಲಾ ಧರ್ಮಗಳಿಗೂ ಸಮಾನ ಗೌರವ ಮತ್ತು ಬಹುಸಾಂಸ್ಕೃತಿಕ ಭಾರತದ ಏಕತೆಯ ಮೇಲೆ ಆಧಾರಿತವಾಗಿತ್ತು.

**ಅಲ್ಪಸಂಖ್ಯಾತರ ಹಕ್ಕುಗಳು:** ಅಂಬೇಡ್ಕರ್ ಅವರು ಅಲ್ಪಸಂಖ್ಯಾತರು ಮತ್ತು ದುರ್ಬಲ ಸಮುದಾಯಗಳಿಗೆ ರಾಜಕೀಯ ಪ್ರಾತಿನಿಧ್ಯ ಮತ್ತು ಸಾಂವಿಧಾನಿಕ ರಕ್ಷಣೆ ಅಗತ್ಯವೆಂದು ವಾದಿಸಿದರು. ನೆಹರು ಅವರು ಧರ್ಮ, ಭಾಷೆ ಮತ್ತು ಸಂಸ್ಕೃತಿಯ ವೈವಿಧ್ಯತೆಯನ್ನು ಭಾರತದ ಪ್ರಜಾಪ್ರಭುತ್ವದ ಭಾಗವಾಗಿ ಸ್ವೀಕರಿಸಿ, ಅಲ್ಪಸಂಖ್ಯಾತರ ಹಕ್ಕುಗಳನ್ನು ರಕ್ಷಿಸುವ ನೀತಿಯನ್ನು ಬೆಂಬಲಿಸಿದರು.

**ಆರ್ಥಿಕ ಅಭಿವೃದ್ಧಿ ಮತ್ತು ರಾಜ್ಯದ ಪಾತ್ರ:** ಅಂಬೇಡ್ಕರ್ ಅವರು ಆರ್ಥಿಕ ಅಸಮಾನತೆ ನಿವಾರಣೆಗೆ ರಾಜ್ಯದ ಸಕ್ರಿಯ ಪಾತ್ರ, ಭೂಸುಧಾರಣೆ, ಕಾರ್ಮಿಕರ ಹಕ್ಕುಗಳು ಮತ್ತು ರಾಜ್ಯ ಸಮಾಜವಾದದ ಕೆಲವು ಅಂಶಗಳನ್ನು ಪ್ರತಿಪಾದಿಸಿದರು. ನೆಹರು ಅವರು ಮಿಶ್ರ ಆರ್ಥಿಕತೆ, ಸಾರ್ವಜನಿಕ ವಲಯ, ಕೈಗಾರಿಕೀಕರಣ, ಪಂಚವಾರ್ಷಿಕ ಯೋಜನೆಗಳು ಮತ್ತು ಯೋಜಿತ ಆರ್ಥಿಕ ಅಭಿವೃದ್ಧಿಗೆ ಆದ್ಯತೆ ನೀಡಿದರು.

**ಕೈಗಾರಿಕೀಕರಣ ಮತ್ತು ಆಧುನಿಕತೆ:** ಅಂಬೇಡ್ಕರ್ ಅವರು ಕೈಗಾರಿಕೀಕರಣವನ್ನು ಕೃಷಿಯ ಮೇಲಿನ ಅತಿಯಾದ ಅವಲಂಬನೆಯನ್ನು ಕಡಿಮೆ ಮಾಡುವ ಹಾಗೂ ಉದ್ಯೋಗಾವಕಾಶಗಳನ್ನು ವಿಸ್ತರಿಸುವ ಸಾಧನವೆಂದು ನೋಡಿದರು. ನೆಹರು ಅವರ ಆಧುನಿಕತೆಯ ಪರಿಕಲ್ಪನೆಯಲ್ಲಿ ವೈಜ್ಞಾನಿಕ ಮನೋಭಾವ, ಕೈಗಾರಿಕೀಕರಣ, ತಂತ್ರಜ್ಞಾನ, ಆಧುನಿಕ ಶಿಕ್ಷಣ ಮತ್ತು ಯೋಜಿತ ಅಭಿವೃದ್ಧಿ ಪ್ರಮುಖವಾಗಿದ್ದವು.

**ರಾಷ್ಟ್ರೀಯತೆ ಮತ್ತು ರಾಷ್ಟ್ರ ನಿರ್ಮಾಣ:** ಅಂಬೇಡ್ಕರ್ ಅವರ ರಾಷ್ಟ್ರೀಯತೆಯು ಸಾಮಾಜಿಕ ಸಮಾನತೆ, ಸಾಂವಿಧಾನಾತ್ಮಕ ನಾಗರಿಕತ್ವ ಮತ್ತು ಭ್ರಾತೃತ್ವದ ಮೇಲೆ ಆಧಾರಿತವಾಗಿತ್ತು. ಸಾಮಾಜಿಕವಾಗಿ ವಿಭಜಿತ ಸಮಾಜದಲ್ಲಿ ಕೇವಲ ರಾಜಕೀಯ ಸ್ವಾತಂತ್ರ್ಯ ಸಾಕಾಗುವುದಿಲ್ಲ ಎಂಬುದು ಅವರ ನಿಲುವಾಗಿತ್ತು. ನೆಹರು ಅವರು ಪ್ರಜಾಪ್ರಭುತ್ವ, ಧರ್ಮನಿರಪೇಕ್ಷತೆ, ಬಹುತ್ವ ಮತ್ತು ಆಧುನಿಕತೆಯನ್ನು ಭಾರತದ ರಾಷ್ಟ್ರ ನಿರ್ಮಾಣದ ಆಧಾರಗಳಾಗಿ ಪರಿಗಣಿಸಿದರು.

**ವಿದೇಶಾಂಗ ನೀತಿ:** ಅಂಬೇಡ್ಕರ್ ಅವರ ವಿದೇಶಾಂಗ ಚಿಂತನೆಗಳಲ್ಲಿ ರಾಷ್ಟ್ರೀಯ ಭದ್ರತೆ, ವಾಸ್ತವವಾದ, ಪ್ರಾದೇಶಿಕ ರಾಜಕೀಯ ಮತ್ತು ಭಾರತದ ಸ್ವಾಯತ್ತ ಹಿತಾಸಕ್ತಿಗಳ ಪರಿಗಣನೆ

ಕಂಡುಬರುತ್ತದೆ. ನೆಹರು ಅವರು ಅಲಿಪ್ತ ನೀತಿ, ಶಾಂತಿಯುತ ಸಹಬಾಳ್ವೆ, ವಸಾಹತುಶಾಹಿ ವಿರೋಧ ಮತ್ತು ವಿಶ್ವಶಾಂತಿಗೆ ಹೆಚ್ಚಿನ ಒತ್ತು ನೀಡಿದರು. ಇವರು ಜಾಗತಿಕ ಶೀತಲ ಸಮರದ ಸಂದರ್ಭದಲ್ಲಿ ಭಾರತವನ್ನು ಯಾವುದೇ ಮಹಾಶಕ್ತಿ ಬಣದೊಂದಿಗೆ ಸಂಪೂರ್ಣವಾಗಿ ಜೋಡಿಸದೆ ಸ್ವತಂತ್ರ ವಿದೇಶಾಂಗ ನೀತಿಯನ್ನು ಅನುಸರಿಸಿದರು.

**ಮಹಿಳಾ ಸಮಾನತೆ:** ಅಂಬೇಡ್ಕರ್ ಅವರು ಮಹಿಳೆಯರ ಆಸ್ತಿ ಹಕ್ಕು, ವಿವಾಹ ಮತ್ತು ವಿಚ್ಛೇದನದ ಹಕ್ಕು, ದತ್ತು ಸ್ವೀಕಾರದ ಹಕ್ಕು, ಸಮಾನ ನಾಗರಿಕ ಹಕ್ಕುಗಳಂತಹ ಪ್ರಧಾನ ವಿಷಯಗಳಿಗೆ ವಿಶೇಷ ಗಮನ ನೀಡಿದರು. ಹಿಂದೂ ಸಂಹಿತೆ ಮಸೂದೆ ಜಾರಿಯ ಮೂಲಕ ಭಾರತೀಯ ಸಮಸ್ತ ಮಹಿಳೆಯರ ಹಕ್ಕುಗಳನ್ನು ಕಾನೂನುಬದ್ಧವಾಗಿ ಹೆಚ್ಚು ಬಲಪಡಿಸಲು ಪ್ರಯತ್ನಿಸಿದರು. ನೆಹರು ಅವರು ಮಹಿಳೆಯರ ರಾಜಕೀಯ, ಶೈಕ್ಷಣಿಕ ಮತ್ತು ಸಾಮಾಜಿಕ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸಿ, ಆಧುನಿಕ ಭಾರತೀಯ ಸಮಾಜದಲ್ಲಿ ಲಿಂಗ ಸಮಾನತೆಗೆ ಹೆಚ್ಚಿನ ಬೆಂಬಲ ನೀಡಿದರು.

**ಶಿಕ್ಷಣ ಮತ್ತು ವೈಜ್ಞಾನಿಕ ಮನೋಭಾವ:** ಅಂಬೇಡ್ಕರ್ ಅವರು ಶಿಕ್ಷಣವನ್ನು ಸಾಮಾಜಿಕ ಬಿಡುಗಡೆಯ ಪ್ರಮುಖ ಸಾಧನವೆಂದು ಪರಿಗಣಿಸಿದರು. ಅದರಲ್ಲಿಯೂ ವಿಶೇಷವಾಗಿ ಶೋಷಿತ ಜನಸಮುದಾಯಗಳು ಶಿಕ್ಷಣದ ಮೂಲಕ ತಮ್ಮ ಹಕ್ಕುಗಳ ಅರಿವು ಪಡೆದುಕೊಳ್ಳಬೇಕು ಎಂದು ಒತ್ತಿಹೇಳಿದರು. ನೆಹರು ಅವರು ಶಿಕ್ಷಣ, ವಿಜ್ಞಾನ ಮತ್ತು ತಂತ್ರಜ್ಞಾನವನ್ನು ರಾಷ್ಟ್ರದ ಆಧುನೀಕರಣದ ಪ್ರಮುಖ ಸಾಧನಗಳಾಗಿ ಪರಿಗಣಿಸಿ ವೈಜ್ಞಾನಿಕ ಸಂಸ್ಥೆಗಳ ಅಭಿವೃದ್ಧಿಗೆ ಉತ್ತೇಜನ ನೀಡಿದರು.

**ರಾಜ್ಯ ಮತ್ತು ವ್ಯಕ್ತಿಯ ಸಂಬಂಧ:** ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ರಾಜ್ಯವು ನಾಗರಿಕರ ಸ್ವಾತಂತ್ರ್ಯತೆ, ಸಮಾನತೆ ಮತ್ತು ಹಕ್ಕುಗಳನ್ನು ರಕ್ಷಿಸುವ ಸಾಂವಿಧಾನಿಕ ಸಾಧನವಾಗಿರಬೇಕು. ಅದರಲ್ಲಿಯೂ ವಿಶೇಷವಾಗಿ ದುರ್ಬಲ ಜನವರ್ಗಗಳ ಹಕ್ಕುಗಳ ರಕ್ಷಣೆಯಲ್ಲಿ ರಾಜ್ಯದ ಪಾತ್ರವೂ ಹೆಚ್ಚಿನ ಮಹತ್ವದ್ದಾಗಿತ್ತು. ನೆಹರು ಅವರು ಕಲ್ಯಾಣ ರಾಜ್ಯದ ಪರಿಕಲ್ಪನೆಯನ್ನು ಬೆಂಬಲಿಸುವ ಮೂಲಕ ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ಕಲ್ಯಾಣದಲ್ಲಿ ರಾಜ್ಯದ ಸಕ್ರಿಯ ಪಾತ್ರವನ್ನು ಪ್ರಬಲವಾಗಿಯೇ ಪ್ರತಿಪಾದಿಸಿದರು.

ಅಂಬೇಡ್ಕರ್ ಮತ್ತು ನೆಹರು ಇಬ್ಬರೂ ಆಧುನಿಕ, ಪ್ರಜಾಪ್ರಭುತ್ವಾತ್ಮಕ ಮತ್ತು ಸಮಾನತಾಧಾರಿತ ಭಾರತದ ನಿರ್ಮಾಣಕ್ಕೆ ಬದ್ಧರಾಗಿದ್ದರೂ, ಅವರ ರಾಜಕೀಯ ಚಿಂತನೆಗಳ ಆದ್ಯತೆಗಳಲ್ಲಿ ಕೆಲವು ಪ್ರಮುಖ ವ್ಯತ್ಯಾಸಗಳಿದ್ದವು. ಅಂಬೇಡ್ಕರ್ ಅವರ ಚಿಂತನೆಯ ಕೇಂದ್ರಬಿಂದು ಸಾಮಾಜಿಕ ನ್ಯಾಯ, ಜಾತಿ ನಿರ್ಮೂಲನೆ, ಸಮಾನತೆ, ರಾಜಕೀಯ ಪ್ರಾತಿನಿಧ್ಯ, ಮೂಲಭೂತ ಹಕ್ಕುಗಳು ಮತ್ತು ಸಾಂವಿಧಾನಿಕ ರಕ್ಷಣೆಯಾಗಿತ್ತು. ಇದಕ್ಕೆ ಹೋಲಿಸಿದರೆ, ನೆಹರು ಅವರು ಸಂಸದೀಯ ಪ್ರಜಾಪ್ರಭುತ್ವ, ರಾಷ್ಟ್ರನಿರ್ಮಾಣ, ಆರ್ಥಿಕ ಯೋಜನೆ, ಕೈಗಾರೀಕರಣ ಮತ್ತು ವೈಜ್ಞಾನಿಕ ಆಧುನೀಕರಣಕ್ಕೆ ಹೆಚ್ಚಿನ ಒತ್ತು ನೀಡಿದರು.

ಅಂಬೇಡ್ಕರ್ ಅವರು ಹಿಂದುಳಿದ ಮತ್ತು ಶೋಷಿತ ಜನಸಮುದಾಯಗಳಿಗೆ ಸಾಂವಿಧಾನಿಕ ಹಾಗೂ ಸಾಂಸ್ಥಿಕ ರಕ್ಷಣೆಯ ಮೂಲಕ ಸಾಮಾಜಿಕ ಸಮಾನತೆಯನ್ನು ಸಾಧಿಸಲು ಪ್ರಯತ್ನಿಸಿದರೆ, ನೆಹರು ಅವರು ಕಲ್ಯಾಣರಾಜ್ಯ, ಸಮಾನ ಪೌರತ್ವ ಮತ್ತು ಆರ್ಥಿಕ ಅಭಿವೃದ್ಧಿಯ ಮೂಲಕ ಸಾಮಾಜಿಕ ಅಸಮಾನತೆಗಳನ್ನು ಕಡಿಮೆ ಮಾಡಲು ಒತ್ತು ನೀಡಿದರು. ಆರ್ಥಿಕ ಕ್ಷೇತ್ರದಲ್ಲಿ ಅಂಬೇಡ್ಕರ್ ಅವರು ಆರ್ಥಿಕ ಪ್ರಜಾಪ್ರಭುತ್ವ ಮತ್ತು ಸಾಮಾಜಿಕ ಭದ್ರತೆಗೆ ಮಹತ್ವ ನೀಡಿದರೆ, ನೆಹರು ಅವರು ಯೋಜಿತ ಅಭಿವೃದ್ಧಿ, ಸಾರ್ವಜನಿಕ ವಲಯ ಮತ್ತು ಮಿಶ್ರ ಆರ್ಥಿಕ ವ್ಯವಸ್ಥೆಯನ್ನು ಬೆಂಬಲಿಸಿದರು. ಆಧುನೀಕರಣದ ವಿಚಾರದಲ್ಲಿ ಅಂಬೇಡ್ಕರ್ ಅವರಿಗೆ ಶಿಕ್ಷಣ, ಕಾನೂನು ಮತ್ತು ಸಾಮಾಜಿಕ ವಿಮೋಚನೆ ಪ್ರಮುಖ ಸಾಧನಗಳಾಗಿದ್ದರೆ, ನೆಹರು ಅವರಿಗೆ ವಿಜ್ಞಾನ, ತಂತ್ರಜ್ಞಾನ ಮತ್ತು ಕೈಗಾರೀಕರಣ ಪ್ರಮುಖ ಸಾಧನಗಳಾಗಿದ್ದವು. ವಿದೇಶಾಂಗ ನೀತಿಯಲ್ಲಿ ಅಂಬೇಡ್ಕರ್ ಅವರು ರಾಷ್ಟ್ರೀಯ ಹಿತಾಸಕ್ತಿ ಮತ್ತು ಭದ್ರತೆಗೆ ಹೆಚ್ಚಿನ ಮಹತ್ವ ನೀಡಿದರೆ, ನೆಹರು ಅಲಿಪ್ತತೆ, ಶಾಂತಿಯುತ ಸಹಬಾಳ್ವೆ ಮತ್ತು ಅಂತರಾಷ್ಟ್ರೀಯ ಸಹಕಾರಕ್ಕೆ ಆದ್ಯತೆ ನೀಡಿದರು. ಅಂಬೇಡ್ಕರ್ ಅವರ ಸಾಮಾಜಿಕ ನ್ಯಾಯ ಮತ್ತು ಸಾಂವಿಧಾನಿಕ ಸಮಾನತೆಯ ದೃಷ್ಟಿಕೋನ ಹಾಗೂ ನೆಹರು ಅವರ ರಾಷ್ಟ್ರನಿರ್ಮಾಣ, ಆರ್ಥಿಕ ಅಭಿವೃದ್ಧಿ ಮತ್ತು ವೈಜ್ಞಾನಿಕ ಆಧುನೀಕರಣದ ದೃಷ್ಟಿಕೋನಗಳು ಭಾರತದ ಪ್ರಜಾಪ್ರಭುತ್ವ ಮತ್ತು ಆಧುನಿಕ ರಾಷ್ಟ್ರನಿರ್ಮಾಣದ ಪೂರಕ ಆಯಾಮಗಳಾಗಿವೆ ಎಂದು ಪರಿಗಣಿಸುವುದು ಹೆಚ್ಚು ಸಮಂಜಸವಾಗಿದೆ.

ಸಮಕಾಲೀನ ಭಾರತೀಯ ರಾಜಕಾರಣದಲ್ಲಿ ಅಂಬೇಡ್ಕರ್ ಮತ್ತು ನೆಹರು ಅವರ ರಾಜಕೀಯ ಚಿಂತನೆಧಾರೆಗಳು ಸಾಮಾಜಿಕ ನ್ಯಾಯ, ಪ್ರಜಾಪ್ರಭುತ್ವ, ಜಾತ್ಯತೀತತೆ, ಆರ್ಥಿಕ ಅಭಿವೃದ್ಧಿ ಮತ್ತು ರಾಷ್ಟ್ರೀಯ ಏಕತೆಯ ಪ್ರಶ್ನೆಗಳನ್ನು ಅರ್ಥಮಾಡಿಕೊಳ್ಳಲು ಇನ್ನೂ ಹೆಚ್ಚು ಮಹತ್ವದ್ದಾಗಿರುತ್ತವೆ. ಜಾತಿ ಮತ್ತು ಅಸ್ಮಿತೆಯ ರಾಜಕಾರಣದ ಸಂದರ್ಭದಲ್ಲಿ ಅಂಬೇಡ್ಕರ್ ಅವರ ಸಮಾನತೆ, ಸಾಮಾಜಿಕ ನ್ಯಾಯ ಮತ್ತು ರಾಜಕೀಯ ಪ್ರಾತಿನಿಧ್ಯದ ಪರಿಕಲ್ಪನೆಗಳು ಹೆಚ್ಚು ಪ್ರಸ್ತುತವಾಗಿವೆ. ಮೀಸಲಾತಿ ಮತ್ತು ದೃಢೀಕರಣ ಕ್ರಮಗಳ ಮೂಲಕ ಐತಿಹಾಸಿಕವಾಗಿ ವಂಚಿತ ಜನಸಮುದಾಯಗಳಿಗೆ ಸೂಕ್ತ ಅವಕಾಶ ಕಲ್ಪಿಸುವ ಅಗತ್ಯವೂ ಅವರ ರಾಜಕಾರಣದ ಚಿಂತನೆದಾರೆಯೊಂದಿಗೆ ನಿಕಟವಾಗಿ ಸಂಬಂಧಿಸಿರುತ್ತದೆ. ಸಾಂವಿಧಾನಿಕ ಹಕ್ಕುಗಳು, ವೈಯಕ್ತಿಕ ಸ್ವಾತಂತ್ರ್ಯ, ಕಾನೂನಿನ ಆಳ್ವಿಕೆ ಮತ್ತು ಸಾಂವಿಧಾನಿಕ ನೈತಿಕತೆಯ ಕುರಿತು ಅಂಬೇಡ್ಕರ್ ಅವರ ರಾಜಕಾರಣದ ವಿಚಾರಧಾರೆಗಳು ಪ್ರಜಾಪ್ರಭುತ್ವದ ಗುಣಮಟ್ಟವನ್ನು ಮೌಲ್ಯಮಾಪನ ಮಾಡಲು ಪ್ರಮುಖ ಆಧಾರವಾಗಿವೆ. ಇದೇ ಸಂದರ್ಭದಲ್ಲಿ ನೆಹರು ಅವರ ಸಂಸದೀಯ ಪ್ರಜಾಪ್ರಭುತ್ವ, ಜಾತ್ಯತೀತತೆ, ಧಾರ್ಮಿಕ ಬಹುತ್ವ, ವೈಜ್ಞಾನಿಕ ಮನೋಭಾವ, ಆರ್ಥಿಕ ಯೋಜನೆ ಮತ್ತು ರಾಷ್ಟ್ರೀಯ ಏಕೀಕರಣದ ಪರಿಕಲ್ಪನೆಗಳು ಸಮಕಾಲೀನ ಭಾರತದಲ್ಲಿಯೂ ಪ್ರಸ್ತುತವಾಗಿವೆ. ಧಾರ್ಮಿಕ ಮತ್ತು ಸಾಂಸ್ಕೃತಿಕ ವೈವಿಧ್ಯತೆಯ ನಡುವೆ ಸಮಾನ ಪೌರತ್ವವನ್ನು ಕಾಪಾಡುವುದು, ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನು

ಹೆಚ್ಚು ಬಲಪಡಿಸುವುದು ಮತ್ತು ವೈಜ್ಞಾನಿಕ ಹಾಗೂ ತಾಂತ್ರಿಕ ಪ್ರಗತಿಯನ್ನು ಉತ್ತೇಜಿಸುವುದು ಅವರ ಚಿಂತನೆಯ ಪ್ರಮುಖ ಕೊಡುಗೆಗಳಾಗಿವೆ. ಆರ್ಥಿಕ ಕ್ಷೇತ್ರದಲ್ಲಿ ನೆಹರು ಅವರ ಯೋಜಿತ ಅಭಿವೃದ್ಧಿ ಮತ್ತು ಕೈಗಾರೀಕರಣದ ದೃಷ್ಟಿಕೋನವು ಇಂದಿನ ಮಾರುಕಟ್ಟೆ ಆಧಾರಿತ ಆರ್ಥಿಕತೆಯೊಂದಿಗೆ ನೇರವಾಗಿ ಹೊಂದಿಕೆಯಾಗದಿದ್ದರೂ, ಸಾರ್ವಜನಿಕ ಕಲ್ಯಾಣ, ಮೂಲಸೌಕರ್ಯ, ಶಿಕ್ಷಣ, ಆರೋಗ್ಯ ಮತ್ತು ಸಾಮಾಜಿಕ ಭದ್ರತೆಯಲ್ಲಿ ರಾಜ್ಯದ ಜವಾಬ್ದಾರಿಯ ಕುರಿತು ಮಹತ್ವದ ಚರ್ಚೆಗೆ ಅವಕಾಶ ನೀಡುತ್ತದೆ.

**ಉಪಸಂಹಾರ:** ಅಂಬೇಡ್ಕರ್ ಮತ್ತು ನೆಹರೂ ಅವರ ರಾಜಕೀಯ ವಿಚಾರಧಾರೆಗಳು ಸಮಕಾಲೀನ ಭಾರತದ ರಾಜಕಾರಣವನ್ನು ಅರ್ಥಮಾಡಿಕೊಳ್ಳಲು ಮಹತ್ವದ ಬೌದ್ಧಿಕ ಸಂಪನ್ಮೂಲಗಳಾಗಿವೆ. ಅಂಬೇಡ್ಕರ್ ಅವರು ಸಾಮಾಜಿಕ ನ್ಯಾಯ, ಸಮಾನತೆ, ಪ್ರಾತಿನಿಧ್ಯ, ವೈಯಕ್ತಿಕ ಹಕ್ಕುಗಳು, ಸಾಂವಿಧಾನಿಕತೆ ಮತ್ತು ಸಾಮಾಜಿಕ ಪ್ರಜಾಪ್ರಭುತ್ವಕ್ಕೆ ಒತ್ತು ನೀಡಿದರೆ, ನೆಹರೂ ಅವರು ಸಂಸದೀಯ ಪ್ರಜಾಪ್ರಭುತ್ವ, ಜಾತ್ಯತೀತತೆ, ವೈಜ್ಞಾನಿಕ ಮನೋಭಾವ, ಆರ್ಥಿಕ ಯೋಜನೆ, ಕೈಗಾರಿಕೀಕರಣ, ರಾಷ್ಟ್ರೀಯ ಏಕೀಕರಣ ಮತ್ತು ಸ್ವತಂತ್ರ ವಿದೇಶಾಂಗ ನೀತಿಗೆ ಮಹತ್ವ ನೀಡಿದರು. ಇಂದಿನ ಭಾರತದಲ್ಲಿ ಜಾತಿ ಅಸಮಾನತೆ, ಮೀಸಲಾತಿ, ಸಾಮಾಜಿಕ ಪ್ರಾತಿನಿಧ್ಯ, ಧಾರ್ಮಿಕ ಬಹುತ್ವ, ಆರ್ಥಿಕ ಅಭಿವೃದ್ಧಿ, ವಿಜ್ಞಾನ–ತಂತ್ರಜ್ಞಾನ ಮತ್ತು ರಾಷ್ಟ್ರೀಯ ಏಕೀಕರಣದಂತಹ ಪ್ರಶ್ನೆಗಳಲ್ಲಿ ಇವರ ಚಿಂತನೆಗಳು ಇನ್ನೂ ಹೆಚ್ಚು ಪ್ರಸ್ತುತವಾಗಿರುತ್ತವೆ. ಆದರೆ ಅಂಬೇಡ್ಕರ್ ಮತ್ತು ನೆಹರೂ ಅವರ ವಿಚಾರಧಾರೆಗಳನ್ನು ಬದಲಾಗುತ್ತಿರುವ ಸಾಮಾಜಿಕ, ಆರ್ಥಿಕ ಮತ್ತು ಜಾಗತಿಕ ಪರಿಸ್ಥಿತಿಗಳ ನೆಲೆ ಮತ್ತು ಹಿನ್ನೆಲೆಯಲ್ಲಿ ವಿಮರ್ಶಾತ್ಮಕವಾಗಿ ಮರುಪರಿಶೀಲಿಸುವುದು ಅಗತ್ಯವಾಗಿರುತ್ತದೆ.

**ಆಧಾರ ಗ್ರಂಥಗಳು**

- ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು, ಸಂಪುಟ–01 ರಿಂದ 22, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ, 2015
- ಘೋರೆ.ಎಂ.ಎಸ್, ಭಾರತದಲ್ಲಿ ಜಾತಿ ಮತ್ತು ಸಾಮಾಜಿಕ ಬದಲಾವಣೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2010
- ಶ್ರೀನಿವಾಸ.ಎಂ.ಎನ್, ಆಧುನಿಕ ಭಾರತದಲ್ಲಿ ಸಾಮಾಜಿಕ ಬದಲಾವಣೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2008.
- Nehru, Jawaharlal, The Discovery of India.
- Nehru, Jawaharlal, An Autobiography.
- Nehru, Jawaharlal, Glimpses of World History.
- Keer, Dhananjay, Dr.Ambedkar: Life and Mission.
- Gopal, Sarvepalli, Jawaharlal Nehru: A Biography.
- Jaffrelot, Christophe, Dr.Ambedkar and Untouchability: Analysing and Fighting Caste.
- Omvedt, Gail, Ambedkar: Towards an Enlightened India.